6) ಸರ್ಕಾರದ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಕಂದಾಯ ಇಲಾಖೆ.

7) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

ಜಾನುವಾರುಗಳ ರಕ್ಷಣೆ

46(101); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ, (ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟಿವೆ;

ಆ) ಈ ಜಿಲ್ಲೆಯಲ್ಲಿ ಮೇವಿನ ಸಮಸ್ಯೆಯಿಂದಾಗಿ ರೈತರು ತಮ್ಮ ಜಾನುವಾರುಗಳನ್ನು ಕಸಾಯಿ ಖಾನೆಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಮಾರಾಟ ತಡೆಯಲು ಜಾನುವಾರುಗಳಿಗೆ ಅಗತ್ಯ ಮೇವನ್ನು ಪೂರೈಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ; (ವಿವರ ನೀಡುವುದು)?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶು ಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) 2012 ರ ಜಾನುವಾರು ಗಣತಿಯಂತೆ ಒಟ್ಟು 3.65 ಲಕ್ಷ ಜಾನುವಾರುಗಳಿವೆ.

ಆ) ಇಲ್ಲ.

ಇ) ಮುಂಬರುವ ದಿನಗಳಲ್ಲಿ ಜಾನುವಾರುಗಳಿಗೆ ಮೇವಿನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದಿಂದ 15,430 ಮೇವಿನ ಮಿನಿ–ಕಿಟ್‌ಗಳನ್ನು ಸರಬರಾಜು ಮಾಡಿ ಮೇವು ಬೆಳೆಯಲು ಕ್ರಮ ವಹಿಸಲಾಗಿದೆ.
ಬರಪರಿಹಾರದಡಿ ಮಂಜೂರಾದ ರು 30.00 ಲಕ್ಷ ಅನುದಾನದಲ್ಲಿ ಮಿನಿ–ಕಿಟ್‌ಗಳನ್ನು ಸರಬರಾಜು ಮಾಡಿ ಮೇವು ಬೆಳೆಯಲು ಕ್ರಮವಹಿಸಲಾಗಿದೆ.